ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	196
2	ಸದಸ್ಯರ ಹೆಸರು	ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
3	ಉತ್ತರಿಸಬೇಕಾದ ದಿನಾಂಕ	09.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿಂದುಳಿದ ಬ್ರಾಹ್ಮಣ ಸಮುದಾಯದವರಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡಲಾಗು ತ್ತಿದೆಯೇ; ಹಾಗಿದ್ದಲ್ಲಿ ಯಾವ ದಿನಾಂಕದಿಂದ ನೀಡಲಾಗುತ್ತದೆ;	ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ಪ್ರವರ್ಗಗಳ ಜಾತಿ ಪಟ್ಟಿಯನ್ನು ಹೊರಡಿಸಲಾಗಿದ್ದು, ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 228 ಬಿಸಿಎ 2000; ದಿನಾಂಕ:30.03.2002 ರಲ್ಲಿ ಹೊರಡಿಸಲಾದ ಜಾತಿ ಪಟ್ಟಿಯಲ್ಲಿರುವ ಜನಾಂಗದವರಿಗೆ ಜಾತಿ ಮತ್ತು ಆದಾಯ ದೃಢೀಕರಣ ಪತ್ರವನ್ನು ನಾಡಕಛೇರಿ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿದೆ. ಆದರೆ, ಬ್ರಾಹ್ಮಣ ಸಮುದಾಯದ ಜಾತಿಯ ಹೆಸರುಗಳು ಸದರಿ ಸರ್ಕಾರದ ಆದೇಶದಲ್ಲಿ ಹೊರಡಿಸಲಾದ ಜಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲದೇ ಇರುವುದರಿಂದ, ಸದರಿ ಸಮುದಾಯದವರಿಗೆ ನಾಡಕಛೇರಿ ತಂತ್ರಾಂಶದ ಮೂಲಕ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸಲು ಅವಕಾಶವಿರುವುದಿಲ್ಲ. ಮುಂದುವರೆದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 75 ಬಿಸಿಎ 2019; ದಿನಾಂಕ:14.05.2019 ರಲ್ಲಿ ಭಾರತ ಸರ್ಕಾರದ ನಾಗರೀಕ ಹುದ್ದೆಗಳು, ಸೇವೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಂದ ಮೀಸಲಾತಿ ಪಡೆಯಲು ಅರ್ಹ ಅಭ್ಯರ್ಥಿಗಳಿಗೆ ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರವನ್ನು ಒದಗಿಸಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ. ಅದರಂತೆ, ಸದರಿ ಆದೇಶದ ಅನುಬಂಧದಲ್ಲಿರುವ ಕ್ರ.ಸಂ-140 ರಲ್ಲಿರುವ ಬ್ರಾಹ್ಮಣ ಸಮುದಾಯದವರಿಗೆ ಮಾತ್ರ ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರವನ್ನು ದಿನಾಂಕ:23.05.2019 ರಿಂದ ವಿತರಿಸಲಾಗಿರುತ್ತದೆ. ರಾಜ್ಯದಲ್ಲಿ ಆದಾಯ ಮತ್ತು ಸ್ವತ್ತು ಪ್ರಮಾಣ ಪತ್ರಕ್ಕಾಗಿ ದಿನಾಂಕ:23.05.2019 ರಿಂದ 04.12.2020 ರವರೆಗೆ 12010 ಅರ್ಜಿಗಳು ಸ್ವೀಕೃತವಾಗಿದ್ದು, 9417 ಪ್ರಮಾಣ ಪತ್ರಗಳನ್ನು ವಿತರಿಸಲಾಗಿರುತ್ತದೆ.

ಆ)	ಹಿಂದುಳಿದ ಬ್ರಾಹ್ಮಣ ಸಮುದಾಯದವರಿಗೆ ಯಾವ ಮಾನದಂಡದ ಆಧಾರದ ಮೇಲೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಕನಿಷ್ಠ ಕಾಲಮಿತಿ ನಿಗದಿಗೊಳಿಸಲಾಗಿದೆ; ಹಾಗೂ ಇತರೆ ಸಮುದಾಯದವರಿಗೆ ಯಾವ ಮಾನದಂಡಗಳ ಆಧಾರದ ಮೇಲೆ ಗರಿಷ್ಠ ಕಾಲಮಿತಿ ನಿಗದಿಗೊಳಿಸ ಲಾಗಿದೆ; (ವಿವರ ನೀಡುವುದು)	ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಇತ್ಯಾದಿ) ಅಧಿನಿಯಮ, 1990 ರ ಸೆಕ್ಷನ್-4ಎ ಅನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸುವ ಸಕ್ಷಮ ಪ್ರಾಧಿಕಾರಿಗಳನ್ನಾಗಿ ತಹಸೀಲ್ದಾರರನ್ನು ಮಾಡಲಾಗಿರುತ್ತದೆ. ಇತರೆ ಹಿಂದುಳಿದ ವರ್ಗಗಳಿಗೆ ನೇಮಕಾತಿ ಮೀಸಲಾತಿ ಉದ್ದೇಶಕ್ಕಾಗಿ '4ಎ' ಪ್ರಕರಣದ ಮೇರೆಗೆ ನೀಡಲಾಗುವ ಆದಾಯ ಪ್ರಮಾಣ ಪತ್ರವನ್ನು 5 ವರ್ಷಗಳ ಅವಧಿಗೆ ಸಿಂಧುವಾಗಿರುವಂತೆ ಆದೇಶಿಸಲಾಗಿರುತ್ತದೆ.
ಇ)	ಹಿಂದುಳಿದ ಬ್ರಾಹ್ಮಣ ಸಮುದಾಯ ದವರಿಗೂ ಜೀವಿತಾ ವಧಿಯವರೆಗೆ ಜಾತಿ ಪ್ರಮಾಣ ಪತ್ರ ಮತ್ತು ಕನಿಷ್ಟ 5 ವರ್ಷಗಳವರೆಗೆ ಆದಾಯ ಪ್ರಮಾಣ ಪತ್ರಗಳನ್ನು ನೀಡುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)	ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ಕಂಇ 55 ಎಜೆಎಸ್ 2020

(ಆರ್.ಅಶೋಕ)
ಕಂದಾಯ ಸಚಿವರು